**ಡಿ.ರೂಪಾ**

**ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್**

# ನನ್ನ ನಿರ್ಧಾರ ನನ್ನದೇ..



ನಾನು ಮೊದಲಿನಿಂದಲೂ ತುಂಬ ಸ್ವತಂತ್ರವಾದ ಮನೋಭಾವನೆ ಹೊಂದಿದವಳು. ತಂದೆ ತಾಯಿ ನಾನು ಹೇಳಿದ್ದಕ್ಕೆ ಅಡ್ಡ ಬರ್ತಾ ಇರ್ಲಿಲ್ಲ. ಯಾವತ್ತೂ ವಿರೋಧ ಮಾಡಿ ಕೆಲಸ ಮಾಡ್ಬೇಕು ಅನ್ನೋ ಸಂದರ್ಭ, ಪ್ರಮೇಯ ಬರಲೇ ಇಲ್ಲ. ನನ್ನ ಮೇಲೆ ಅವರಿಗೆ 'ಚೆನ್ನಾಗಿ ಓದ್ತಾಳೆ, ಸಾಧನೆ ಮಾಡ್ತಾಳೆ' ಅನ್ನೋ ಭರವಸೆ ಇತ್ತು. 9ನೇ ಕ್ಲಾಸ್‌ನಲ್ಲಿರುವ ನಾನು ದೆಹಲಿಯಲ್ಲಿ ನಡೆದ ರಿಪಬ್ಲಿಕ್ ಡೇ ಕ್ಯಾಂಪ್‌ಗೆ ಆಯ್ಕೆ ಆದೆ. ಕರ್ನಾಟಕ ಗೋವಾ ಡೈರಕ್ಟೊರೇಟ್ ನಡೆಸುವ ಕ್ಯಾಂಪ್ ಅದು. ಆ ಎನ್‌ಸಿಸಿ ಕ್ಯಾಂಪ್‌ಗೆ ಹೋದವರಿಗೆ ಎಕ್ಸ್‌ಟ್ರಾ ಮಾರ್ಕ್ಸ್ ಇರುತ್ತೆ. ಕರ್ನಾಟಕದಲ್ಲಿ ಮೆಡಿಕಲ್, ಎಂಜಿನಿಯರಿಂಗ್ ಸೀಟ್‌ಗೆ ಎನ್‌ಸಿಸಿ ಕೋಟಾ ಇದೆ. ನಂಗೆ ಗ್ಯಾರಂಟಿ ಸೀಟ್ ಸಿಗ್ತಿತ್ತು, ಆದ್ರೆ ನಂಗೆ ಇಷ್ಟ ಇರಲಿಲ್ಲ. ನಾನು ಆರ್ಟ್ಸ್ ತಗೊಂಡೆ.

ಆಗ ಬಹಳಷ್ಟು ಜನ ಬೈದ್ರು. ಯಾಕೆ ಇದನ್ನು ತಗೊಂಡೆ ಅಂತ. ಎಸ್‌ಎಸ್‌ಎಲ್‌ಸಿಯಲ್ಲಿ ರ್‍ಯಾಂಕ್ ಬಂದಿತ್ತು. ಬಹಳಷ್ಟು ಕಡೆ ಒಬ್ಬೊಬ್ಬಳೇ ಹೋಗಿ ಕಾಂಪಿಟೀಷನ್ಸ್‌ನಲ್ಲಿ ಭಾಗವಹಿಸಿದ್ದೀನಿ. ನಾನು 15 ವರ್ಷದವಳಿರುವಾಗಲೇ ಸ್ವತಂತ್ರವಾಗಿ ಯೋಚನೆ ಮಾಡ್ತಿದ್ದೆ. ಮುಂದೆ ಯುಪಿಎಸ್‌ಸಿ ಪರೀಕ್ಷೆ ಬರೆದು ಪೊಲೀಸ್ ಅಧಿಕಾರಿ ಆಗಬೇಕು ಅಂತಲೇ ನಿರ್ಧಾರ ಮಾಡಿದ್ದೆ. ಅದನ್ನು ಸಾಧಿಸಿದ ಸಂತೃಪ್ತಿ ನನಗಿದೆ. ನಂಗೆ ಅನಿಸಿದ್ದನ್ನು ನಾನೇ ಹೇಳೇ ಹೇಳ್ತೀನಿ, ಮಾಡ್ಬೇಕು ಅನ್ನೋದನ್ನು ಮಾಡೇ ಮಾಡ್ತೀನಿ. ಯಾರೂ ನನ್ನನ್ನು ತಡೀತಾ ಇರ್ಲಿಲ್ಲ. ಆ ಛಲ ನನ್ನಲ್ಲಿ ಮೊದಲಿನಿಂದಲೂ ಇತ್ತು.

ನನ್ನ ಸ್ವಭಾವ ಹಾಗೆ ಇರೋದ್ರಿಂದ ನಾನು ಸ್ವತಂತ್ರಳು ಅಂತಲೇ ಭಾವಿಸ್ತೀನಿ. ನನ್ನ ಪತಿ ಮೌನೀಶ್ ಮೌದ್ಗಿಲ್ ಕೂಡ ತುಂಬ ಪ್ರೋತ್ಸಾಹ ಕೊಡ್ತಾರೆ. ಅವರೂ ಐಎಎಸ್ ಆಫೀಸರ್. ತುಂಬ ಪ್ರಾಮಾಣಿಕ ಅಧಿಕಾರಿ. ಅವರೇ ನನಗೆ ಸ್ಫೂರ್ತಿ, ಮಾರ್ಗದರ್ಶನ ಕೊಡ್ತಾರೆ. ಅವರಿಂದ ಬಹಳಷ್ಟು ಕಲಿತುಕೊಂಡಿದ್ದೀನಿ. ಆದ್ರೆ ನನ್ನ ಸ್ವಾತಂತ್ರ್ಯವನ್ನು ಯಾವತ್ತೂ ಕಳ್ಕೊಂಡಿಲ್ಲ.

ಮನೆಯಲ್ಲೂ ನನಗೆ ಸಾಕಷ್ಟು ಸ್ವಾತಂತ್ರ್ಯ ಸಿಕ್ಕಿದೆ. ನಾನು ದಾವಣಗೆರೆ ಮೂಲದವಳು. ಅಮ್ಮ ಹೇಮಾವತಿ, ತಂದೆ ಜೆ.ಎಸ್. ದಿವಾಕರ್. ನಾನು ಮತ್ತು ನನ್ನ ತಂಗಿ– ಇಬ್ಬರು ಹೆಣ್ಣು ಮಕ್ಕಳು. ಗಂಡು ಮಕ್ಕಳು ಇಲ್ಲದೇ ಇರುವ ಕಾರಣ ಮನೆಯಲ್ಲಿ ತಾರತಮ್ಯ ಅನ್ನೋದು ಗೊತ್ತಾಗ್ಲಿಲ್ಲ. ಎಷ್ಟೋ ಸ್ನೇಹಿತೆಯರು ಹೇಳ್ತಾ ಇದ್ರು, ನಮ್ಮ ಅಣ್ಣಂಗೆ ತಮ್ಮಂಗೆ ಎಲ್ಲಾದರೂ ಹೋಗೋದಕ್ಕೆ ಬಿಡ್ತಾರೆ, ಟ್ರಿಪ್ ಹೋಗಕ್ಕೆ ಬಿಡ್ತಾರೆ, ಆದ್ರೆ ನಮಗೆ ಬಿಡಲ್ಲ ಅಂತ. ಆದ್ರೆ ಆ ಅನುಭವ ನಂಗೆ ಆಗ್ಲೇ ಇಲ್ಲ. ನಂಗೆ ಯಾವತ್ತೂ ಸ್ವಾತಂತ್ರ್ಯ ಇಲ್ಲ ಅಂತ ಅನಿಸಲೇ ಇಲ್ಲ. ಓದಿದ್ದು ಗರ್ಲ್ಸ್ ಕಾನ್ವೆಂಟ್ ಹಾಗೂ ಕಮಲಮ್ಮ ಮಹಿಳಾ ಕಾಲೇಜಿನಲ್ಲಿ. ಯಾವಾಗಲೂ ಓದೋದಕ್ಕೆ, ಎಲ್ಲದಕ್ಕೂ ಪ್ರೋತ್ಸಾಹ ಕೊಡ್ತಿದ್ದರು. ತಾಯಿ ಪೋಸ್ಟಲ್ ಡಿಪಾರ್ಟ್‌ಮೆಂಟ್‌ನಲ್ಲಿ ಸೂಪರ್ ವೈಸರ್. ತಾಯಿಗೂ ನಾನು ಕೆಲಸ ಮಾಡಬೇಕು ಅಂತ ಆಸೆ ಇತ್ತು. ತಂದೆ ಕೂಡ ಎಸ್‌ಪಿ, ಡಿಸಿ ಆಗಬೇಕಾದ್ರೆ ಯಾವ ಪರೀಕ್ಷೆ ಬರೀಬೇಕು ಅನ್ನೋ ಬಗ್ಗೆ ಹೇಳ್ತಾ ಇದ್ರು. ಈ ನಿಟ್ಟಿನಲ್ಲಿ ಉತ್ತೇಜನ ಕೊಡ್ತಾ ಇದ್ರು. ನಾನು ಸೈಕಾಲಜಿ ತಗೊಂಡೆ. ನಂಗೆ ಡಿಗ್ರಿ ಓದ್ತಾ ಇರೋವಾಗಲೇ ಮದುವೆ ಸಂಬಂಧಗಳು ಬಂದಿದ್ದರೂ ತಾಯಿ 'ಮಗಳು ಗುರಿ ಸಾಧಿಸಿದ ಮೇಲೆ ಮದುವೆ' ಅಂತಿದ್ರು. ತಂಗಿಯೂ ಪರೀಕ್ಷೆ ಬರೆದು ಇಂಡಿಯನ್ ರೆವಿನ್ಯೂ ಸರ್ವೀಸ್‌ನಲ್ಲಿ ಅಧಿಕಾರಿ ಆಗಿದ್ದಾಳೆ.

**ಕಠಿಣ ನಿರ್ಧಾರ ತಗೊಂಡಿದ್ದೀನಿ...**

ವೃತ್ತಿಗೆ ಬಂದ ಆರಂಭದಿಂದಲೇ ನಾನು ಬಹಳಷ್ಟು ಕಠಿಣ ನಿರ್ಧಾರಗಳನ್ನು ತಗೊಂಡಿದ್ದೀನಿ. ಇದು ಬಹಳಷ್ಟು ಜನರಿಗೆ ಗೊತ್ತಾಗಿಲ್ಲ. ಯಾಕೆಂದರೆ ನಾನು ಉತ್ತರ ಕರ್ನಾಟಕದಲ್ಲಿ ಸಾಕಷ್ಟು ಕೆಲಸ ಮಾಡಿದ್ದೀನಿ. ಧಾರವಾಡ, ಬೀದರ್, ಗದಗ, ಯಾದಗಿರಿ. ಅದೆಲ್ಲ ಮಹಾನಗರಕ್ಕೆ ಬಹಳ ದೂರದ ಜಾಗ. ಬೆಂಗಳೂರಿನಲ್ಲಿ ಮಾಡಿದ ಕೆಲಸ ಮಾತ್ರ ಬೇಗ ಸುದ್ದಿ ಆಗುತ್ತದೆ.

ನಾನು ಗದಗದಲ್ಲಿರುವಾಗ ಒಂದು ಘಟನೆ ನಡೀತು. ಒಬ್ಬ ಮಾಜಿ ಎಂಎಲ್‌ಎಗೆ ಚುನಾವಣೆಯಲ್ಲಿ ಟಿಕೆಟ್ ಸಿಗಲ್ಲ ಎಂಬ ಗುಮಾನಿ ಇದ್ದದ್ದರಿಂದ ಇದೇ ಕಾರಣಕ್ಕೆ ನರಗುಂದ ಬಸ್‌ನಿಲ್ದಾಣ ಸಮೀಪ ದೊಂಬಿ, ಗಲಾಟೆ ನಡೀತು. ಟಿಕೆಟ್ ಸಿಗಲ್ಲ ಎಂಬ ಹತಾಶೆಯಿಂದ ಆ ಮಾಜಿ ಎಂಎಲ್‌ಎ ಅವರ ಬೆಂಬಲಿಗರನ್ನು ಸೇರಿಸಿ ಇಮೋಷನಲ್ ಆಗಿ ಭಾಷಣ ಮಾಡಿ ಹೋಗಿ ಬಿಟ್ರು.